**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ**

***ಸಿ.ಸಿ. ಸಂಖ್ಯೆ : 348/2018***

**ಡಿಡಬ್ಲ್ಯೂ : *2* ಜೆ ಮೈಕಲ್**

**ದಿನಾಂಕ : *14-05-2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಮಾನ್ಯ ಸ. ಸ. ಅ. ರವರಿಂದ : -**

ನಾನು ಮೂಲತಃ ವಿರಾಜಪೇಟೆಯ ಮಾಲ್ದಾರೆ ಗ್ರಾಮದ ವಾಸಿ. ಸದರಿ ಮಾಲ್ದಾರೆ ಗ್ರಾಮದಲ್ಲಿ ನನ್ನ ಸ್ವಂತ ವಾಸದ ಮನೆ ಇರುತ್ತದೆ. ನಾನು ಮಾಲ್ದಾರೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 1998 ನೇ ಇಸವಿಯಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ನನ್ನ ಮದುವೆಯು 2002 ನೇ ಇಸವಿಯಲ್ಲಿ ನಡೆದಿರುತ್ತದೆ. ನನ್ನ ಮದುವೆಯು ಚಾಸಾ1 ರವರ ಮುಂದಾಳತ್ವದಲ್ಲಿ ನೆರವೇರಿರುತ್ತದೆ ಎಂದರೆ ಸರಿ. ನಾನು ಮೇಲೆ ಹೇಳಿದ ಮಾಲ್ದಾರೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 1998 ನೇ ಇಸವಿಯಲ್ಲಿ ಕೆಲಸಕ್ಕೆ ಸೇರಿದ ದಿನದಿಂದ ಈ ಪ್ರಕರಣ ದಾಖಲಾದ ದಿನದವರೆಗೂ ನನ್ನ ಹಾಗೂ ಚಾಸಾ1 ಸಿ ಎ ಸುಬ್ಬಯ್ಯ ಹಾಗೂ ಚಾಸಾ-2 ಪಳಂಗಪ್ಪ ರವರ ನಡುವೆ ಯಾವುದೇ ದ್ವೇಷ ಅಥವಾ ಮನಸ್ತಾಪ ಇದ್ದಿರುವುದಿಲ್ಲ ಎಂದರೆ ಸರಿ.

ನಾನು ಸದರಿ ಸಂಘದಲ್ಲಿ 1998 ರಲ್ಲಿ ಪಿಗ್ಮಿ ಸಂಗ್ರಹಕಾರನಾಗಿ ಕೆಲಸಕ್ಕೆ ಸೇರಿದ್ದು, 2011 ನೇ ಇಸವಿಯವರೆಗೆ ಆ ರೀತಿ ಪಿಗ್ಮಿ ಸಂಗ್ರಹಗಾರನಾಗಿ ಕೆಲಸ ಮಾಡಿರುತ್ತೇನೆ. ನಂತರ ನಾನು ಸದರಿ ಸಂಘದಲ್ಲಿ ಮಾರಾಟ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದೆ. ನಾನು ಸದರಿ ಸಂಘದಲ್ಲಿ ಆ ರೀತಿ ಮಾರಾಟ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದರಿಂದ ಸದರಿ ಸಂಘದ ಗೋಡೌನ್ ನಲ್ಲಿ ಕಾಫೀ, ಕರಿಮೆಣಸು ಹಾಗೂ ಗೊಬ್ಬರ ಎಷ್ಟು ಸಂಗ್ರಹಣೆಯಾಗಿತ್ತು ಎಂಬುದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದಿರುತ್ತದೆ ಎಂದರೆ ಸರಿ. ಕಾಫೀ ಹಾಗೂ ಕರಿಮೆಣಸಿನ ಆಧಾರದ ಮೇಲೆ ಸಾಲವನ್ನು ನೀಡುವಾಗ ಅವುಗಳನ್ನು ಅಳತೆ ಮಾಡಿ, ರಶೀತಿ ನೀಡಿ ಶೇಖರಣೆ ಮಾಡುವ ಕೆಲಸವನ್ನು

ನಾನೇ ಮಾಡುತ್ತಿದ್ದೆ ಎಂದರೆ ಸರಿ. ಸಂಘದ ಗೋಡೌನ್ ನಿಂದ ನಮ್ಮ ಮನೆಗೆ ಸುಮಾರು 2 ಕಿ ಮೀ ಅಂತರವಿರುತ್ತದೆ.

ದಿನಾಂಕ 28-02-2017 ರಂದು ಗೋಡೌನ್ ನಲ್ಲಿರುವ ದಾಸ್ತಾನನ್ನು ಪರಿಶೀಲಿಸುವಾಗ ನಾನು ಅಲ್ಲಿಯೇ ಇದ್ದಿರುತ್ತೇನೆ. ಆಗ ಎಷ್ಟು ಕರಿಮೆಣಸು ಹಾಗೂ ಕಾಫೀ ದಾಸ್ತಾನು ಇತ್ತು ಎಂಬುದರ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ 01-03-2017 ರಂದು ಸಂಘಕ್ಕೆ ರಜೆ ಇದ್ದುದ್ದಾಗಿ ತಿಳಿಸಿದ್ದು ಆ ದಿನ ನಾನು ಮನೆಯಲ್ಲಿ ಇದ್ದಿರುತ್ತೇನೆ. ದಿನಾಂಕ 02-03-2017 ರಂದು ಸಂಘಕ್ಕೆ ರಜೆ ಅರ್ಜಿಯನ್ನು ನಾನೇ ಖುದ್ದಾಗಿ ನೀಡಿರುತ್ತೇನೆ. ಸದರಿ ದಿನದಂದು ಸಂಘಕ್ಕೆ ನನ್ನ ರಜೆ ಅರ್ಜಿಯನ್ನು ನಾನು ಖುದ್ದಾಗಿ ನೀಡಿರುವುದಿಲ್ಲ ಬದಲಾಗಿ ನನ್ನ ಹೆಂಡತಿಯ ಮೂಲಕ ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆರೋಗ್ಯ ಸಮಸ್ಯೆ ಇದ್ದು, ಮೈಸೂರಿಗೆ ಹೋಗಿರುವುದರಿಂದ ನಾನು ದಿನಾಂಕ 02-03-2017 ರಂದು ರಜೆ ಹಾಕಿರುತ್ತೇನೆ.

ಈ ಪ್ರಕರಣ ದಾಖಲಾಗುವವರೆಗೂ ನನ್ನ ಕೌಟುಂಬಿಕ ಜೀವನದಲ್ಲಿ ಯಾವುದೇ ವೈಮನಸ್ಸು ಇದ್ದಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 03-03-2017 ರಂದು ನನ್ನ ಕುಟುಂಬದಲ್ಲಿ ತೊಂದರೆಯಾಗಿ ವಿಷ ಸೇವಿಸಿರುವ ಬಗ್ಗೆ ತಿಳಿಸಿದ್ದು, ಆ ದಿನ ನನ್ನನ್ನು ನನ್ನ ಭಾವ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಆ ಸಮಯದಲ್ಲಿ ಚಾಸಾ1 ಸಿ ಎ ಸುಬ್ಬಯ್ಯ ಹಾಗೂ ಚಾಸಾ-2 ಪಳಂಗಪ್ಪ ನವರು ಬಂದು ನನ್ನ ಯೋಗಕ್ಷೇಮ ವಿಚಾರಿಸಿರುತ್ತಾರೆ. ನಾನು ಮಡಿಕೇರಿಯ ವೈವಾಸ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ನಾನು ಆಸ್ಪತ್ರೆಯಿಂದ ಬಿಡುಗಡೆ ಆಗುವ ಮುನ್ನ ಚಾಸಾ1 ರವರು ಆಸ್ಪತ್ರೆಗೆ ಬಂದು ಗೋಡೌನ್ ನಲ್ಲಿ ದಾಸ್ತಾನು ಕಡಿಮೆ ಇರುವ ಬಗ್ಗೆ ನನ್ನನ್ನು ವಿಚಾರಿಸಿರುವುದಿಲ್ಲ. ಆ ರೀತಿ ಗೋಡೌನ್ ನಲ್ಲಿ ದಾಸ್ತಾನು ಕಡಿಮೆಯಾಗಿರುವ ಬಗ್ಗೆ ನನಗೆ ದಿನಾಂಕ 22-03-2017 ರಂದು ಅಂದರೆ ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ದಿನ ಗೊತ್ತಾಗಿರುತ್ತದೆ. ಸದರಿ ವಿಚಾರವನ್ನು ಚಾಸಾ1 ಸಿ ಎ ಸುಬ್ಬಯ್ಯ ರವರೇ ತಿಳಿಸಿರುತ್ತಾರೆ. ಆಗ ನಾನು ಗೋಡೌನ್ ನಲ್ಲಿ ಬಂದು ದಾಸ್ತಾನು ನೋಡಿ ಹೇಳುವುದಾಗಿ ತಿಳಿಸಿರುತ್ತೇನೆ.

ಚಾಸಾ6 ಸಿ ಕೆ ಬಶೀರ್ ಮತ್ತು ಚಾಸಾ8 ಶಿವ ರವರು ಸಂಘದಲ್ಲಿ ಕಾಳುಮೆಣಸನ್ನು ಅಡವಿಟ್ಟ ವಿಚಾರ ನನಗೆ ಗೊತ್ತಿರುತ್ತದೆ. ಆ ರೀತಿ ಅವರಿಂದ ಕಾಳು ಮೆಣಸನ್ನು ದಾಸ್ತಾನು ಮಾಡಿಕೊಂಡ ಬಗ್ಗೆ ಅವರಿಗೆ ನಾನೇ ರಶೀತಿ ನೀಡಿರುತ್ತೇನೆ.

ಸಾಮಾನ್ಯವಾಗಿ ಕಾಳು ಮೆಣಸು ಹಾಗೂ ಕಾಫೀ ದಾಸ್ತಾನನ್ನು ರಶೀತಿಯಲ್ಲಿ ನಮೂದು ಮಾಡಿ, ನಾನೇ ಬಿಡುಗಡೆ ಮಾಡುತ್ತೇನೆ ಎಂದರೆ ಸರಿ. ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನನ್ನ ಸೋದರರು ಹಾಗೂ ಸಂಬಂಧಿಕರೊಂದಿಗೆ ಸಂಘಕ್ಕೆ ಬಂದು ಚಾಸಾ-1 ರವರ ಸಮಕ್ಷಮ ದಾಸ್ತಾನಿನಲ್ಲಿ ಕಡಿಮೆ ಇದ್ದ ಕರಿಮೆಣಸಿಗೆ ಸಂಬಂಧಿಸಿದಂತಹ ಹಣವನ್ನು ನಾನೇ ಪಾವತಿಸುವುದಾಗಿ ಒಪ್ಪಿಕೊಂಡು ಕ್ಷಮೆಯಾಚಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಆ ರೀತಿ ಒಪ್ಪಿಕೊಂಡಂತೆ ಸಂಘಕ್ಕೆ ಹಣವನ್ನು ಪಾವತಿಸದೆ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2 ಹಾಗೂ 3ನೇ ಆರೋಪಿಗಳು ಈ ಪ್ರಕರಣದ ಸುಮಾರು ಮೂರು ವರ್ಷಗಳ ಹಿಂದಿನಿಂದ ನನಗೆ ಪರಿಚಿತರು. ಸಾಕ್ಷಿ ಮುಂದುವರೆದು ಅವರು ನಾನು ಕೆಲಸ ಮಾಡಿಕೊಂಡಿದ್ದ ಸಂಘದ ಗ್ರಾಹಕರಾಗಿದ್ದು ಆ ಮೂಲಕ ಅವರು ನನಗೆ ಪರಿಚಿತರಾಗಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಪ್ರಕರಣ ದಾಖಲಾಗುವ ಹಿಂದಿನ ಮೂರು ವರ್ಷದಿಂದ ಸಂಘದಲ್ಲಿ ದಾಸ್ತಾನು ಇಟ್ಟಿದ್ದರು. ನಾನು ಚಾಸಾ2 ಪಳಂಗಪ್ಪ ಹಾಗೂ ಸಿಬ್ಬಂದಿಗಳ ಗಮನಕ್ಕೆ ಬಾರದಂತೆ ಚಾಸಾ6 ಹಾಗೂ 8 ರವರು ಸಂಘದಲ್ಲಿ ದಾಸ್ತಾನು ಇಟ್ಟಿದ್ದ 104 ಚೀಲ ಕರಿಮೆಣಸಿನ್ನು 2 ಹಾಗೂ 3ನೇ ಆರೋಪಿಗಳಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ಹಾಗೂ 3ನೇ ಆರೋಪಿಗಳೊಂದಿಗೆ ಶಾಮೀಲಾಗಿ ಸಂಘಕ್ಕೆ ಮೋಸ ಹಾಗೂ ವಂಚನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾಡಿದ ಕೃತ್ಯ ಬೆಳಕಿಗೆ ಬಂದ ನಂತರ ಈ ಕೃತ್ಯದ ದಾರಿ ತಪ್ಪಿಸುವ ಉದ್ದೇಶದಿಂದ ನನ್ನ ಹೆಂಡತಿಯ ಮೂಲಕ ಸಂಘಕ್ಕೆ ರಜೆ ಅರ್ಜಿಯನ್ನು ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಾನು ಯಾವುದೇ ಕೌಟುಂಬಿಕ ಸಮಸ್ಯೆಯಿಂದ ವಿಷ ಸೇವನೆ ಮಾಡಿರುವುದಿಲ್ಲ ಬದಲಾಗಿ ಈ ಪ್ರಕರಣ ಬೆಳಕಿಗೆ ಬಂದ ನಂತರ ಅದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಆ ರೀತಿ ವಿಷ ಸೇವನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ1 ರವರ ಬಳಿ ಕೃತ್ಯದ ಬಗ್ಗೆ ಒಪ್ಪಿಕೊಂಡು ಆ ಬಗ್ಗೆ ಹಣವನ್ನು ಪಾವತಿಸುವುದಾಗಿ ಒಪ್ಪಿಕೊಂಡು ದೂರು ಕೊಡುವುದು ಬೇಡವೆಂದು ವಿನಂತಿಸಿಕೊಂಡು ನಂತರ ಒಪ್ಪಿಕೊಂಡಂತೆ ನಡೆಯದೆ ದೂರು ಕೊಡುವಲ್ಲಿ ವಿಳಂಬ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ಹಾಗೂ 3ನೇ ಆರೋಪಿಗಳೊಂದಿಗೆ ನೇರವಾಗಿ ಶಾಮೀಲಾಗಿ ಈ

ಕೃತ್ಯವನ್ನು ಎಸಗಿದ್ದು, ನ್ಯಾಯಾಲಯದಿಂದ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮಾನ್ಯ ಸ ಸ ಅ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.